

## ನಕ್ಕುಬಿಡಿ



### ಅಂದು-ಇಂದು

ಆಗಿನ ಕಾಲದ ಮತ್ತು ಈಗಿನ ಫಂಕ್ಷನ್‌ಗಳ ಮೂಲಭೂತ ವ್ಯತ್ಯಾಸವೇನೆಂದರೆ....

ಆಗ ಊಟ ಮಾಡುವವರು ಒಂದೇ ಕಡೆ ಇರುತ್ತಿದ್ದರು ಮತ್ತು ಬಡಿಸುವವರು ಅತ್ತಿಂದಿತ್ತ ಅಲೆಯುತ್ತಿದ್ದರು.

ಈಗ ಬಡಿಸುವವರು ಒಂದೇ ಕಡೆ ಇರುತ್ತಾರೆ. ಊಟ ಮಾಡುವವರು ಅತ್ತಿಂದಿತ್ತ ಅಲೆಯುತ್ತಾರೆ

★★★

### ಪರಿಹಾರ

ಗುಂಡ ತನ್ನ ಪತ್ನಿಯೊಂದಿಗೆ ಜೋತಿಷಿ ಬಳಿ ಹೋದ. ಜಾತಕ ನೋಡಿದ ಜೋತಿಷಿ 'ನೀವಿಬ್ಬರೂ ದೀರ್ಘಕಾಲ ಜೊತೆಯಾಗಿ ಬಾಳುತ್ತೀರಿ' ಎಂದ.

ಗುಂಡ ತಕ್ಷಣವೇ ಕೇಳಿದ. 'ಇದಕ್ಕೇನೂ ಪರಿಹಾರ ಇಲ್ವಾ ಜೋತಿಷಿಗಳೇ..'

★★★

### ಜೀನ್ಸ್‌ಗೆ ಅಲ್ಲ

ತಾಯಿ: ಹಣೆಗೆ ಒಂದ್ ಬೊಟ್ಟು ಇಟ್ಟುಕೊಂಡು ಹೋಗು.

ಶೀಲಾ: ಜೀನ್ಸ್ ಮೇಲೆ ಯಾರಮ್ಮ ಬೊಟ್ ಇಡುತ್ತಾರೆ, ನೀನೊಂದು?

ತಾಯಿ: ನಾನು ಹೇಳಿದ್ದು ಹಣೆ ಮೇಲೆ ಬೊಟ್ ಇಡು ಅಂತ, ಜೀನ್ಸ್‌ಗೆ ಅಲ್ಲ!

★★★

### ಕಳಿಸೋಕೆ

ತವರಿಂದ ವಾಪಸು ಬಂದ ಶೀಲಾಳನ್ನು ಕರೆತರಲು ಸ್ಟೇಶನ್ನಿಗೆ ಬಂದ ಗುಂಡನಿಗೆ ಶೀಲಾ ಹೇಳಿದ್ಲು:

'ರೀ ಅಲ್ನೋಡಿ ಆ ಜೋಡಿ. ಹೆಂಡತಿಯನ್ನು ಎಷ್ಟು ಪ್ರೀತಿ ಮಾಡ್ತಿದಾನೆ. ಎಷ್ಟು ಸಂತೋಷವಾಗಿದ್ದಾನೆ. ನೀವು ನೋಡಿ ಯಾವಾಗಲೂ ಜೋಲು ಮುಖ ಮಾಡಿರ್ತೀರಾ'

ಗುಂಡ: 'ಲೇ ಅವ ಹೆಂಡ್ತೀಗೆ ಕಳಿಸೋಕೆ ಬಂದಿದಾನೆ ಕಣೇ. ಕರಕೊಂಡು ಹೋಗೋಕ್ಕೆ ಅಲ್ಲ.'

★★★

### ಕೊರತೆ

'ಮದುವೆ ಸ್ವರ್ಗದಲ್ಲೇ ನಡೆದಿರುತ್ತೆ ಅಂತಾರೆ ಆದ್ರೆ ಬಿಡುಗಡೆ ಮಾತ್ರ ಯಾಕಿಲ್ಲ...?

'ಅಲ್ಲಿ ವಕೀಲರ ಕೊರತೆಯಿದೆಯಂತೆ'

(ಸಂಗ್ರಹ) ತೈರೊಳ್ಳಿ ಮಂಜುನಾಥ ಉಡುಪ

---

ಗುಂಡ : (ಕೋಪದಿಂದ) ಏನೇ ನಿನ್ನನ್ನೇ ಕೇಳ್ತಾ ಇದೀನಿ! ಮದುವೆಗೆ ಮುಂಚೆ ನಿನಗೆ ಬೇರೆ ಯಾರ ಜೊತೆಯಲ್ಲಾದ್ರೂ ಅಫೇರ್ ಇತ್ತಾ?

ಹೆಂಡತಿ: (ಮೌನ)

ಗುಂಡ: ಯಾಕೆ ಸುಮ್ಮನಾಗಿ ಬಿಟ್ಟೆ? ಹೇಳು ಬೇಗ?

ಹೆಂಡತಿ: ತಾಳಿ ತಾಳಿ! ನಾನೇನೂ ಸುಮ್ನೆ ಇಲ್ಲ! ಮನಸ್ಸಿನಲ್ಲೇ ಎಣಿಸ್ತಾ ಇದೀನಿ.

★★★



ಹೆಂಡತಿ: (ಸಿಟ್ಟಿನಿಂದ) ಏನ್ರೀ ನಾನು ಜೀವಂತವಾಗಿರುವಾಗಲೇ ನೀವು ಆ ಮೇನಕಾನ ಮದುವೆ ಆಗ್ತಿದೀರಂತೆ.

ಗುಂಡ: ಹೌದು ಕಣೇ! ಆಕಸ್ಮಾತ್ ನೀನು ಸತ್ತು ಹೋದ್ರೆ ನನಗೆ ದುಃಖ ತಡೆಯೋಕೆ ಆಗೋಲ್ಲ! ಆಗ ನನ್ನನ್ನು ಸಮಾಧಾನ ಮಾಡೋಕೆ ಒಬ್ಬರು ನಿನ್ನ ಜಾಗದಲ್ಲಿ ಇರೋದು ಬೇಡವೆ?

★★★

ಹೆಂಡತಿ: (ಫೋನಿನಲ್ಲಿ) ರೀ ನಮ್ಮ ಪುಟ್ಟ ಪಾಪು 10 ದಿನಗಳಿಂದ ನಡೀತಾ ಇದೆ.

ಪ್ರೊಫೆಸರ್: ಅರೆ ಹೌದಾ? ಹತ್ತು ದಿನದಿಂದ ನಡೀತಾ ಇದೆ ಅಂದ್ರೆ ಅದು ಈಗ ಯಶವಂತಪುರ ದಾಟಿ ಹೋಗಿರುತ್ತೆ. ಹೋಗಿ ಹುಷಾರಾಗಿ ವಾಪಸ್ ಕರ್ಕೊಂಡ್ ಬಾ.

★★★

ಒಂದು ದೇವಸ್ಥಾನದ ಸೂಚನಾ ಫಲಕದಲ್ಲಿ ಹೀಗೆ ಬರೆದಿತ್ತು: 'ನರಕ ಎಂದರೆ ಏನು ಎಂಬುದು ನಿಮಗೆ ಗೊತ್ತಿದೆಯೇ?'

ಅದರ ಕೆಳಗೆ ಹೀಗೆ ಬರೆದಿತ್ತು–

'ಗೊತ್ತಿಲ್ಲದಿದ್ದರೆ ಶ್ರೀಮಾನ್ ಸುಬ್ಬಣ್ಣರವರ ಉಪನ್ಯಾಸ ಕೇಳಿ'

(ಸಂಗ್ರಹ) ಎಂ.ಕೆ. ಮಂಜುನಾಥ್


ASHTAVAIDYAN THAIKKATTU MOOSS
VAIDYARATNAM




VAIDYARATNAM
'The Cradle of Ayurveda'

ಲಭ್ಯವಿರುವ ಸೇವೆಗಳು:

- ವೈದ್ಯ ಸಮಾಲೋಚನೆ.
  (ಸಾಮಾನ್ಯ ಮತ್ತು ವಿಶೇಷ ಚಿಕಿತ್ಸಾಲಯಗಳು)
- ಕೇರಳ ಅಷ್ಟವೈದ್ಯ ಆಯುರ್ವೇದ ಚಿಕಿತ್ಸೆ
- ವೈದ್ಯರತ್ನಂ ಆಯುರ್ವೇದ ಔಷಧಿಗಳು

ಬೆಂಗಳೂರು ಟ್ರೀಟ್‌ಮೆಂಟ್ ಸೆಂಟರ್ :
ನಂ. 2335, 17ನೇ ಕ್ರಾಸ್, 24ನೇ ಮೈನ್, ಸೆಕ್ಟರ್-1,
ಹೆಚ್.ಎಸ್.ಆರ್.ಲೇ-ಔಟ್, ಬೆಂಗಳೂರು – 560 102
ಫೋನ್: 080–22580020
care@vaidyaratnamblr.com
ಹಿರಿಯ ವೈದ್ಯರು: ಡಾ|| ಕೇಶವಭಟ್ ಸರ್ಪಂಗಳ

ಕೇಂದ್ರ ಕಛೇರಿ: ಒಲ್ಲೂರು, ತೈಕಾಡುಶೇರಿ, ತ್ರಿಶ್ಶೂರ್,
ಕೇರಳ–680306, ದೂರವಾಣಿ: +91–487 2432732
www.vaidyaratnammooss.com